**ಸಿ.ಸಿ.ನಂ. 254/2017**

ಪಿಡಬ್ಲೂಃ 1
ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.
ದಿನಾಂಕಃ 03-02-2026

ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರಿದ ಪಾಟೀ ಸವಾಲು ಆರೋಪಿ ಪರ ವಕೀಲರಿಂದ ಃ</u>

10. ನಾನು ಆರೋಪಿಗೆ ಬೆಳಗ್ಗೆ 11.30 ರಿಂದ 11.45 ಗಂಟೆ ಸಮಯದಲ್ಲಿ ಹಣ ನೀಡಿರುತ್ತೇನೆ. ಆರೋಪಿಗೆ ಎಷ್ಟು ಮುಖ ಬೆಲೆಯ ಹಣವನ್ನು ನೀಡಿದ್ದೇನೆ ಎಂದು ನನಗೆ ನೆನಪಿಲ್ಲ. ನಾನು ನನ್ನ ಯಾವ ಸ್ನೇಹಿತರಿಂದ ಎಷ್ಟು ಹಣ ಪಡೆದು ಆರೋಪಿಗೆ ನೀಡಿದ್ದೇನೆ ಎಂದು ನನಗೆ ಈಗ ನೆನಪಿಲ್ಲ. ನನ್ನ ಸ್ನೇಹಿತರು ತಮ್ಮ ವೈಯಕ್ತಿಕ ಕೆಲಸಕ್ಕಾಗಿ ನನ್ನಿಂದ ಹಣ ಪಡೆದುಕೊಂಡಿದ್ದರು, ಆ ಹಣವನ್ನು ಪಡೆದು ನಾನು ಆರೋಪಿಗೆ ನೀಡಿರುತ್ತೇನೆ. ಒಟ್ಟು ಎಷ್ಟು ಜನ ಸೆನೇಹಿತರಿಂದ ಹಣ ಪಡೆದು ಆರೋಪಿಗೆ ನೀಡಿದ್ದೇನೆ ಎಂದು ನನಗೆ ನೆನಪಿಲ್ಲ. ನನ್ನ ಸ್ನೇಹಿತರಿಂದ ಹಣ ಪಡೆದು, ಎಷ್ಟು ದಿನಗಳ ನಂತರ ಆರೋಪಿಗೆ ನೀಡಿದ್ದೇನೆ ಎಂದು ನೆನಪಿಲ್ಲ. ನನ್ನ ಸ್ನೇಹಿತರಿಂದ ನಾನು ಒಟ್ಟಾರೆ ಎಷ್ಟು ಹಣ ಪಡೆದಿದ್ದೆ ಎಂದು ನನಗೆ ಹೇಳಲು ಆಗುವುದಿಲ್ಲ, ನನಗೆ ನೆನಪಿಲ್ಲ. ನಾನು ಹಣ ಪಡೆದುಕೊಂಡಿದ್ದ ನನ್ನ ಸ್ನೇಹಿತರು ಯಾವ ಊರಿನವರು ಮತ್ತು ಹೆಸರು ಏನು ಎಂದು ನನಗೆ ಹೇಳಲು ಆಗುವುದಿಲ್ಲ. ನನ್ನ ಸ್ನೇಹಿತರಿಂದ ನನಗೆ ಯಾವುದೇ ಹಣ ಬಂದಿಲ್ಲ, ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2010 ರಲ್ಲಿ ಆರೋಪಿಯ ಪರಿಚಯ ಆದ ನಂತರ ನಾನು ಹಲವಾರು ಬಾರಿ ಭೇಟಿ ಮಾಡಿರುತ್ತೇನೆ. 2010 ರಿಂದ 2014 ನೇ ಸಾಲಿನ ವರೆವಿಗೂ ನಾನು ಆರೋಪಿಯೊಂದಿಗೆ ಯಾವುದೇ ಸಭೆ ಸಮಾರಂಭಗಳಲ್ಲಿ ಭಾಗವಹಿಸಿಲ್ಲ. ನಾನು ಆರೋಪಿಯನ್ನು ಯಾವುದೇ ಸಭೆ ಸಮಾರಂಭಗಳಲ್ಲಿ ಆಹ್ವಾನ ನೀಡಿರುವುದಿಲ್ಲ, ಆ ಸಮಯದಲ್ಲಿ ಯಾವುದೇ ಸಮಾರಂಭಗಳನ್ನು ಮಾಡಿಲ್ಲ. ಆರೋಪಿ ಚಿಕ್ಕಜಾಲದಲ್ಲಿ ವಾಸವಾಗಿದ್ದಾರೆ ಎಂದು

ತಿಳಿದುಕೊಂಡಿದ್ದೇನೆ. ಆರೋಪಿಯ ಮನೆಯ ವಿಳಾಸ ನನಗೆ ಗೊತ್ತಿಲ್ಲ, ಆದರೆ ಅವರು ಆಫೀಸಿಗೆ ಬರುತ್ತಿದ್ದರು. ಆರೋಪಿಯ ಮನೆ ವಿಳಾವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ, ಕಾರಣ ಅವರು ನನ್ನನ್ನು ಯಾವಾಗಲೂ ಕಚೇರಿಯಲ್ಲಿಯೇ ಭೇಟಿ ಮಾಡುತ್ತಿದ್ದರು. ಆರೋಪಿಯ ಕುಟುಂಬದವರ ಬಗ್ಗೆ ನಾನು ತಿಳಿದುಕೊಂಡಿಲ್ಲ. ಆರೋಪಿ ಲ್ಯಾಂಡ್ ರೆಕಾರ್ಡ್ಸ್ ಮಾಡುವ ಸಲುವಾಗಿ ಹಾಗೂ ಗ್ರಾನೈಟ್ ಬಿಸಿನೆಸ್ ಮಾಡುವ ಸಲುವಾಗಿ ನನ್ನಿಂದ ಹಣ ಪಡೆದುಕೊಂಡಿದ್ದರು. ಆರೋಪಿ ನನ್ನಿಂದ ಹಣ ಪಡೆದುಕೊಳ್ಳುವಾಗ 2 ತಿಂಗಳಲ್ಲಿ ಹಣ ವಾಪಸ್ ನೀಡುತ್ತೇನೆ ಎಂದು ತಿಳಿಸಿದರು. ಆರೋಪಿಯನ್ನು ಹೊರತುಪಡಿಸಿ ನಾನು ಹಲವಾರು ಜನರಿಗೆ ಹಣ ನೀಡಿ ವಾಪಸ್ ಪಡೆದುಕೊಂಡಿರುತ್ತೇನೆ, ನನ್ನ ಬಳಿ ಫೈನಾನ್ಸ್ ಲೈಸನ್ಸ್ ಇತ್ತು. ಅದನ್ನು ನ್ಯಾಯಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ನಾನೊಬ್ಬನೇ ಫೈನಾನ್ಸ್ ಮಾಡುತ್ತಿದ್ದೆ, ನನೊಂದಿಗೆ ಬೇರೆ ಯಾರು ಇರಲಿಲ್ಲ. ವರ್ಷಕ್ಕೆ ನಾನು ಇಷ್ಟೇ ಹಣ ಸಾಲವಾಗಿ ನೀಡಬೇಕೆಂಬ ಯಾವುದೇ ನಿಯಮ ಇಲ್ಲ. ನಾನು ನನ್ನ ಸಾಕ್ಷ್ಯದಲ್ಲಿ ಆರೋಪಿ ತನ್ನ ಕಾನೂನುಬದ್ಧ ಅವಶ್ಯಕತೆಗೆ ಹಣ ಪಡೆದುಕೊಂಡರು ಎಂದು ಹೇಳಿದ್ದು, ಆ ಅವಶ್ಯಕತೆ ಏನು ಎಂದರೆ ನನಗೆ ಗೊತ್ತಿಲ್ಲ, ಆದರೆ ತಮ್ಮ ಮನೆ ಖರ್ಚಿಗೆ ಮತ್ತು ಗ್ರಾನೈಟ್ ವ್ಯವಹಾರಕ್ಕೆ ಹಣ ಬೇಕು ಎಂದು ತಿಳಿಸಿದ್ದರು. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಗ್ರಾನೈಟ್ ವ್ಯವಹಾರಕ್ಕೆ ಆರೋಪಿ ಹಣ ಪಡೆದಿದ್ದಾರೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ, ಮನೆಯ ವ್ಯವಹಾರ ಎಂದು ತಿಳಿಸಿದ್ದೇನೆ. ಆರೋಪಿ ತಮ್ಮ ಮನೆ ನಿರ್ವಹಣೆಗೆ ಹಣ ಬೇಕು ಎಂದು ಹೇಳಿದರು, ನಿರ್ಧಿಷ್ಟವಾಗಿ ಹೇಳಿಲ್ಲ. ಆರೋಪಿಗೆ ಕುಟುಂಬ ನಿರ್ವಹಣೆಗೆ ಸಾಲ ಪಡೆದುಕೊಳ್ಳುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

11. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ವರ್ಷಕ್ಕೆ 18 ಶೇಕಡಾ ರಂತೆ ಬಡ್ಡಿ ಸೇರಿಸಿ ಹಣ ಹಿಂದಿರುಗಿಸಬೇಕು ಎಂದು ಹೇಳಿ ಆರೋಪಿಗೆ ಹಣ ನೀಡಿ ನಮೂದಿಸಿದ್ದೇನೆ ಎಂದರೆ ಸರಿ. ರಾ ವಿಚಾರವನ್ನು ದೂರಿನಲ್ಲಿ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ, ನೋಟೀಸಿನಲ್ಲಿ ತಿಳಿಸಿರುತ್ತೇನೆ. ಒಂದು ವೇಳೆ ನಾನು ಶೇಕಡಾ 18 ರಂತೆ ಬಡ್ಡಿ ಹಣಕ್ಕೆ ನೀಡಿದ್ದೇ ಆದಲ್ಲಿ ಅದನ್ನು ದೂರಿನಲ್ಲಿ ನಮೂದಿಸುತ್ತಿದ್ದೆ, ಆ ರೀತಿ

ಮಾಡಿಲ್ಲವಾದ್ದರಿಂದ ಈ ವಿಚಾರವನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ, ವಕೀಲರು ದೂರಿನಲ್ಲಿ ನಮೂದಿಸುವುದನ್ನು ಮರೆತಿರಬೇಕು. ದೂರಿನಲ್ಲಿ ಆರೋಪಿ ಕಾನೂನುಬದ್ದ ಅವಶ್ಯಕತೆ ಮತ್ತು ಮನೆ ಖರ್ಚಿಗಾಗಿ ಹಣ ನೀಡಿದ್ದ ಬಗ್ಗೆ ನಮೂದಿಸಿಲ್ಲ ಎಂದರೆ ವಕೀಲರು ಮರೆತಿರಬಹುದು. ನಾನು ಈ ದೂರು ದಾಖಲು ಮಾಡಿದ ನಂತರ 2 ವರ್ಷಗಳ ಕಾಲ ನನ್ನ ಮುಖ್ಯ ವಿಚಾರಣೆಯನ್ನು ಮಾಡಿರುವುದಿಲ್ಲ ಎಂದರೆ, ನಾನು ವಕೀಲರನ್ನು ಬದಲಿಸಿದ್ದ ಕಾರಣ ತಡವಾಗಿರುತ್ತದೆ. ನಾನು ದಿನಾಂಕ 23-02-2015 ರಂದು ಚೆಕ್ ನ್ನು ಬ್ಯಾಂವಕಿಗೆ ಹಾಜರುಪಡಿಸಿದ್ದದೇನೆ ಎಂದರೆ ಸರಿ. ಅದೇ ರೀತಿ ಸುಜೇಂದ್ರ ರವರು ದಿನಾಂಕ 23-02-2015 ಒಂದು ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಿದ್ದಾರೆ ಎಂದರೆ, ಅವರು ಯಾರೆಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಆರೋಪಿಗೆ ಸೇರಿದ ಚೆಕ್ ನ್ನು ಸುಜೇಂದ್ರ ರವರು ಹಾಜರುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸುಜೇಂದ್ರ ರವರು ಸಹ ಆರೋಪಿಯ ವಿರುದ್ದ 2015 ರಲ್ಲಿ ಚೆಕ್ ಪ್ರಕರಣ ದಾಖಲಿಸಿದ್ದು ಅದು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ವಜಾ ಆದ ನಂತರ ನಾನು ರಾೀ ಪ್ರಕರಣದಲ್ಲಿ ಸಾಕ್ಷ್ಯನುಡಿದಿದ್ದೇನೆ ಎಂದರೆ ಸರಿಯಲ್ಲ.

**(ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ, ನೀಡಲಾಯಿತು.)**

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ